ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

714 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬಿಜಾಪುರ ಜಿಲ್ಲೆ, ಬಸವನ ಬಾಗೇವಾಡಿ ಮತ ಕ್ಷೇತ್ರದಲ್ಲಿ ಬಹುಜನ ರೈತರಿಗೆ ಕೃಷಿ ಹೊಂಡ ನಿರ್ಮಿಸಲು ಕಡಿಮೆ ಅನುದಾನ ಬಿಡುಗಡೆಯಾಗಿದ್ದು, ಡಾ: ಡಿ.ಎಂ. ನಂಜುಂಡಪ್ಪ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ಬಸವನ ಬಾಗೇವಾಡಿ ತಾಲ್ಲೂಕಿಗೆ ವಿಶೇಷ ಅನುದಾನದಡಿಯಲ್ಲಿ ಕೃಷಿ ಹೊಂಡ ನಿರ್ಮಾಣಕ್ಕಾಗಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು;

ಆ) ಸರ್ಕಾರದ ಭೌತಿಕ ಗುರಿಯಂತೆ ಕೃಷಿ ಹೊಂಡ ನಿರ್ಮಾಣಕ್ಕಾಗಿ ತೋಟಗಾರಿಕಾ ಇಲಾಖೆಯಿಂದ ಅನುದಾನ ಬಿಡುಗಡೆಯಾಗದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು):

ಅ) ತಾಲ್ಲೂಕಿನ ರೈತರ ಬೇಡಿಕೆಯನ್ನು ಪರಿಗಣಿಸಿ, ಕೃಷಿ ಹೊಂಡ ಹಾಗೂ ಸಮುದಾಯ ಕೆರೆಗಳನ್ನು ನಿರ್ಮಿಸಲು ಕಳೆದ ಮೂರು ವರ್ಷಗಳಲ್ಲಿ ಒಟ್ಟು ರೂ. 121.13 ಲಕ್ಷಗಳ ಸಹಾಯಧನ ನೀಡಲಾಗಿದೆ.

2009–10ನೇ ಸಾಲಿಗೆ ರೂ. 123.26 ಲಕ್ಷಗಳ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.

ಆ) ಹೌದು.

ಇ) 2008–09ನೇ ಸಾಲಿಗೆ ಒಟ್ಟಾರೆ 51 ಪ್ರಸ್ತಾವನೆಗಳಿಗಿದ್ದು, ಹಿಂದಿನ ಸಾಲಿನ ಕಾರ್ಯಕ್ರಮಗಳನ್ನು ಸೇರಿ ಒಟ್ಟು ರೂ. 267.00 ಲಕ್ಷಗಳಿಗೆ

ಕ್ರಿಯಾ ಯೋಜನೆಯನ್ನು ರೂಪಿಸಲಾಗಿತ್ತು. ಆದರೆ, ಕಾರ್ಯಕ್ರಮ ಜಾರಿಗೊಳಿಸಿರುವ ಫಲಾನುಭವಿಗಳನ್ನು ಮಾತ್ರ ಪರಿಗಣಿಸಿ, ಯಾರು ಜಾತಿಗೊಳಿಸಿಲ್ಲವೊ ಅಂತಹವರಿಗೆ ಅಂತಿಮ ಗಡುವು ನೀಡಲಾಗಿ, ಅದರಂತೆ ಕಾಮಗಾರಿ ಪೂರ್ಣಗೊಳ್ಳದ ಫಲಾನುಭವಿಗಳಿಗೆ ಈ ಲಾಭ ದೊರೆತಿರುವುದಿಲ್ಲ. ಒಟ್ಟಾರೆ, 13 ಪ್ರಸ್ತಾವನೆಗಳು ಮಾತ್ರ ಮಾರ್ಗಸೂಚಿಯಂತೆ ಅನುಷ್ಟಾನಗೊಳಿಸಿದ್ದು, ರೂ. 63.04 ಲಕ್ಷಗಳ ಸಹಾಯಧನ ಪಾವತಿಸಲಾಗಿದೆ.

ಶ್ರೀ . ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ತೋಟಗಾರಿಕಾ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 2008–09ನೇ ಸಾಲಿನಲ್ಲಿ 121.13 ಲಕ್ಷ ರೂ. ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ. ನಂಜುಂಡಪ್ಪ ವರದಿ ಪ್ರಕಾರ ಈ ವರ್ಷ 123.26 ಲಕ್ಷ ರೂ.ಗಳಿಗೆ ಯೋಜನೆ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಅದರ ಜೊತೆಗೆ 2008–09ರಲ್ಲಿ 267 ಲಕ್ಷಕ್ಕೆ ಕ್ರಿಯಾ ಯೋಜನೆ ಮಂಜೂರು ಮಾಡಲಾಗಿತ್ತು. ಅದರಲ್ಲಿ ಕೇವಲ 13 ಪ್ರಸ್ತಾವನೆಗಳನ್ನು ಮಾತ್ರ ಮಂಜೂರು ಮಾಡಲಾಗಿದೆ ಎಂದು ಹೇಳಿದ್ದಾರೆ. ಅಲ್ಲಿರತಕ್ಕಂತಹ ಸಮಸ್ಯೆ ಏನೆಂದರೆ, ಅಲ್ಲಿಯ ರೈತರು ತಮ್ಮ ಜಮೀನಿನಲ್ಲಿ ಕೃಷಿ ಹೊಂಡಗಳನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಅವರು ಎಷ್ಟು ಕೆಲಸ ಮಾಡುತ್ತಾರೆ ಅಷ್ಟು ಬಿಲ್ಲನ್ನು ಅಧಿಕಾರಿಗಳು ಕೊಡುತ್ತಿಲ್ಲ. ಅವರು 20% ಕೆಲಸ ಮಾಡಿದರೆ 20% ಹಣ ಕೊಡಬೇಕು, 50% ಕೆಲಸ ಮಾಡಿದರೆ 50% ಹಣ ಕೊಡಬೇಕು. ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಆ ರೀತಿ ಹಣ ಕೊಡುತ್ತಿಲ್ಲ. ಉದಾಹರಣೆಗೆ ಮುಳವಾಡದಲ್ಲಿ ಪರಿಶಿಷ್ಟ ಜಾತಿಯ ಒಬ್ಬ ರೈತ ಅವನ ಹೊಲದಲ್ಲಿ ಕೃಷಿ ಹೊಂಡ ತೆಗೆಯುವುದರಲ್ಲಿ 90% ಕೆಲಸವನ್ನು ಮುಗಿಸಿದ್ದಾನೆ. ನಾನೂ ಹೇಳಿದ್ದೇನೆ, ಉಸ್ತುವಾರಿ ಸಚಿವರು ಹೇಳಿದರೂ ಕೂಡ ಶಾಂತನಗೌಡ ಎನ್ನತಕ್ಕಂತಹ ಅಧಿಕಾರಿ ಪೇಮೆಂಟ್ ಮಾಡಿಲ್ಲ. ಬರದ ತಾಲ್ಲೂಕು ಅದು. ರೈತರ ತಪ್ಪೇನಿದೆ, ಸಾಲ ಮಾಡಿ ಕೆಲಸ ಮಾಡಿರುತ್ತಾರೆ. ಅಲ್ಲಿ ಎಷ್ಟು ಕೆಲಸ ಮಾಡಿರುತ್ತಾರೆ ಅಷ್ಟು ಹಣ ಬಿಡುಗಡೆ ಮಾಡುವುದಕ್ಕೆ ಸಚಿವರು ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕು. ಏಕೆಂದರೆ ಬಿಜಾಪುರ

ಜಿಲ್ಲೆ ಕೃಷಿ ಹೊಂಡಕ್ಕೆ ಹೆಚ್ಚು ಯೋಗ್ಯವಾಗಿರತಕ್ಕಂತಹ ಜಿಲ್ಲೆ ಅದು. ಉದಾಹರಣೆಗೆ ನನ್ನ ಕ್ಷೇತ್ರದ ಹುಕ್ಕಲಿ ಗ್ರಾಮದಲ್ಲಿ ದಾದಾಗೌಡ ಪಾಟೀಲ ಎಂಬ ಒಬ್ಬ ರೈತ ಇಡೀ ಊರಿನ ರೈತರನ್ನು ಸೇರಿಸಿಕೊಂಡು ಈ ಯೋಜನೆ ಉಪಯೋಗ ಪಡೆದುಕೊಂಡು ಎಲ್ಲಾ ರೈತರ ಹೊಲದಲ್ಲಿ ಹೊಂಡ ಮಾಡುವುದರ ಮುಖಾಂತರ ಇವತ್ತು ಅಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ನೀರಿನ ಪ್ರಮಾಣ ಜಾಸ್ತಿಯಾಗಿ ಬೋರ್‌ವೆಲ್ ಜಾಸ್ತಿಯಾಗಿ, ಬಾವಿ ನೀರು ಬರುತ್ತಿವೆ. NHMನಲ್ಲಿ ಮಾಡಿರುವಂತಹ ಬಹಳ ಒಳ್ಳೆಯ ಯೋಜನೆ ಇದು. ಅಲ್ಲಿಯ ಅಧಿಕಾರಿಗಳಿಗೆ ತಿಳಿಸಿ ಕೆಲಸ ಮಾಡತಕ್ಕಂತಹ ರೈತರಿಗೆ ತಕ್ಷಣವೇ ಅವರು ಎಷ್ಟು ಕೆಲಸ ಮಾಡಿರುತ್ತಾರೆ ಅಷ್ಟು ಹಣವನ್ನು ತಕ್ಷಣ ಕೊಡಬೇಕೆಂದು ಅಲ್ಲಿಯ ಅಧಿಕಾರಿಗಳಿಗೆ ಸಚಿವರು ಕಟ್ಟಾಜ್ಞೆಯನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೆ, ಮಂತ್ರಿ ಆಗಿದ್ದವರಿಗೆ ಕೂರಿಸಿ ಅವರೇ ಪ್ರಶ್ನೆ ಕೇಳಿ, ನೀವು ಅವರಿಗೆ ಉತ್ತರ ಹೇಳುವ ಪರಿಸ್ಥಿತಿ ಈ ರಾಜ್ಯಕ್ಕೆ ಬಂದಿತಲ್ಲ ಮಾನ್ಯ ಮುಖ್ಯಮಂತ್ರಿಗಳೇ ಎಂತಹ ದುರ್ದೈವ ಇದು. ಮಾನ್ಯ ಗೌರವಾನ್ವಿತ ಮುಖ್ಯಮಂತ್ರಿಗಳು ಸ್ವಲ್ಪ ನೋಡಬೇಕು. ಮಾನ್ಯ ಬೆಳ್ಳುಬ್ಬಿಯವರು Horticulture Minister ಆಗಿದ್ದುಕೊಂಡು ಆ ನೋವು ತಡೆಯಲಾರದೆ ಪುನ: ಅವರ successorಗೆ ಪ್ರಶ್ನೆ ಕೇಳಿದ್ದಾರೆ. ನೀವು ಅವರಿಗೆ ರಾಜೀನಾಮೆ ಕೊಡಿಸಿ ಇವರನ್ನು ಮಂತ್ರಿ ಮಾಡಿದ್ದೀರಿ.

ಶ್ರೀ ವಿ. ಉಮೇಶ್ ಕತ್ತಿ: ಮಾನ್ಯ ಉಪಾಧ್ಯಕ್ಷರೆ, NHM ಕಾರ್ಯಕ್ರಮದಿಂದ ಈ ರಾಜ್ಯದಲ್ಲಿ ಏನು ಅನುದಾನ ಬಿಡುಗಡೆ ಆಗಿದೆ ಅದರಲ್ಲಿ ಹೆಚ್ಚಿನ ಅನುದಾನವನ್ನು ಬಿಜಾಪುರ ಜಿಲ್ಲೆಗೆ ಮೀಸಲಿಟ್ಟು ಆ ಬಾಗದ ಐದೂ ತಾಲ್ಲೂಕುಗಳಲ್ಲಿ ಈ ಕೃಷಿ ಹೊಂಡಗಳ ಕಾರ್ಯಕ್ರಮವನ್ನು ರೂಪಿಸಿ, ಆ ಜಿಲ್ಲೆಯಲ್ಲಿ ಸುಮಾರು 350ಕ್ಕೂ ಮೇಲ್ಪಟ್ಟು ಕೃಷಿ ಹೊಂಡಗಳಿಗೆ ಮಂಜೂರಾತಿ ಕೊಟ್ಟಿದ್ದೇವೆ. ಕೊಟ್ಟಂತಹ ಮಂಜೂರಾತಿಗಳಲ್ಲಿ ಅವರು ಎರಡು ತಿಂಗಳುಗಳಲ್ಲಿ ಕೆಲಸ ಪ್ರಾರಂಭ ಮಾಡಬೇಕು. NHM ಗೈಡ್‌ಲೈನ್ಸ್‌ನಲ್ಲಿರುವ ಹಾಗೆ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಆದರೆ ಆ ಗೈಡ್‌ಲೈನ್ಸ್‌ನಲ್ಲಿ

ಫಿಟ್ ಇನ್ ಆಗದೆ ಇರುವುದರಿಂದ, ಆ ತಾಲ್ಲೂಕಿನಲ್ಲಿ 51 ಹೊಂಡಗಳಿಗೆ ಮಂಜೂರಾತಿ ಕೊಟ್ಟಿದ್ದರೂ ಸಹಿತ ಆ ಗೈಡ್‌ಲೈನ್ ಅನುಗುಣವಾಗಿ ತೆಗೆದಂತಹ 13 ಹೊಂಡಗಳಿಗೆ ಮಾತ್ರ ಹಣ ಬಿಡುಗಡೆ ಆಗಿದೆ. ಇದಲ್ಲದೆ ಬಿಜಾಪುರ ಜಿಲ್ಲೆಯಲ್ಲಿ ಇದಕ್ಕಿಂತ ಹೆಚ್ಚಾಗಿ without sanctioning ಅಥವಾ ಯಾವುದೇ ಮಂಜೂರಾತಿ ಇಲ್ಲದೆ ಕೆಲಸ ಮಾಡಿರುವ ಉದಾಹರಣೆಗಳು ನಮ್ಮ ಮುಂದಿವೆ ಈಗಾಗಲೇ ಅದರ ಬಗ್ಗೆ enquiry ಮಾಡಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ enquiry ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಏನು ಗಮನಕ್ಕೆ ತಂದಿದ್ದಾರೆ, ಈ ಸದನ ಮುಗಿದ ತಕ್ಷಣ ಬಿಜಾಪುರ ಜಿಲ್ಲೆಗೆ ನಾನೇ ಖುದ್ದಾಗಿ ಹೋಗಿ ಆ ರೈತರಿಗೆ ಭೇಟಿ ಆಗುತ್ತೇನೆ. ಡಿ.ಡಿ. ಬಗ್ಗೆಯೂ ಗಮನಕ್ಕೆ ತಂದಿದ್ದಾರೆ. ಬಿಜಾಪುರ ಜಿಲ್ಲೆಯ ಶಾಸಕರು ಡಿ.ಡಿ. ಬಗ್ಗೆ ನನಗೆ ಸಾಕಷ್ಟು ಗಮನಕ್ಕೆ ತಂದಿದ್ದಾರೆ. ಅಂತಹ ಯಾವುದೇ ತೊಂದರೆಗಳಿದ್ದರೆ ನಾನು ಹೋಗಿ ಸರಿ ಮಾಡುವುದರ ಜೊತೆಗೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತೇನೆಂದು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ M.I. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಾ? ನನ್ನ ಮಾಹಿತಿ ಪ್ರಕಾರ ಅವರಿಗೆ ವರ್ಗಾವಣೆ ಆಗಿದೆ. ಸಸ್ಪೆಂಡ್ ಆಗಿಲ್ಲ.

ಶ್ರೀ ವಿ. ಉಮೇಶ್ ಕತ್ತಿ: ಜಿಲ್ಲಾಧಿಕಾರಿ ಸರಿಯಾಗಿ ವರ್ತನೆ ಮಾಡುವುದಿಲ್ಲವೆಂದು ನನ್ನ ಗಮನಕ್ಕೆ ತಂದಿದ್ದಾರೆ.

ಸದನ ಮುಗಿದ ತಕ್ಷಣ ಬಿಜಾಪುರಕ್ಕೆ ಹೋಗಿ ರೈತರ ಸಮಸ್ಯೆ ಬಗ್ಗೆ ಗಮನ ಹರಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತಗೆದುಕೊಳ್ಳುತ್ತೇನೆ.

ಆ) ಚುಕ್ಕೆ ಗುರ್ತಿಲ್ಲದ ಲಿಖಿತ ಮೂಲಕ ಉತ್ತರಿಸಲಾದ ಪ್ರಶ್ನೆಗಳು

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ದಿನಾಂಕ 15.07.2009ರ 05 ನೇ ಪಟ್ಟಿಯ 'ಇ' ಸಮೂಹಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಉತ್ತರಗಳನ್ನು ಮತ್ತು ದಿನಾಂಕ 16.07.2009 ರ 06ನೇ ಪಟ್ಟಿಯ